295 ಶ್ರೀ ಜಯಚಂದ್ರ ಟಿ.ಬಿ
ಪಿ.ಎಂ.ನರೇಂದ್ರಸ್ವಾಮಿ(ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಮಕ್ಕಳ ಮತ್ತು ಮಹಿಳೆಯರ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಯಾವ ಮೂಲದಿಂದ ಹಾಗೂ ಘಟಕಗಳಿಂದ ಸಾಮಗ್ರಿಗಳನ್ನು ಸರಬರಾಜು ಮಾಡಲಾಗುತ್ತಿದೆ;

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಸಮಗ್ರ ಶಿಶು ಅಭಿವೃದ್ಧಿ ಯೋಜನೆಗಳ ಅಂಗನವಾಡಿ ಕೇಂದ್ರಗಳಿಗೆ ಸ್ಥಳೀಯ ಆಹಾರಗಳಾದ ಮೆಣಸಿನಕಾಯಿ, ಸಾಸಿವೆ, ಉಪ್ಪು, ಕಡಲೆಕಾಳು, ಹೆಸರುಕಾಳು ಪದಾರ್ಥಗಳನ್ನು ತಾಲ್ಲೂಕು ಮಟ್ಟದಲ್ಲಿ ಟೆಂಡರ್ ಕರೆದು ಮಹಿಳಾ ಸ್ವಸಹಾಯ ಸಂಘಗಳಿಂದ/ಮಹಿಳಾ ಮಂಡಲಿಗಳಿಂದ ಖರೀದಿಸಲಾಗುತ್ತಿದೆ. ಅಕ್ಕಿಯನ್ನು FCI ನಿಂದ, ಪಾಮೋಲಿನ್ ಎಣ್ಣೆಯನ್ನು ಸರ್ಕಾರದ ಸಾಮ್ಯದ ಸಂಸ್ಥೆಯಾದ KOF ನಿಂದ, ಶಕ್ತಿಯುತ ಆಹಾರ ಅಮೆಲೈಸ್ಡ್ ಶಕ್ತಿಯುತ ಆಹಾರವನ್ನು M/S ಕ್ರಿಸ್ಪಿ ಫ್ರೈಡ್‌ಗ್ರಾಂ ಇಂಡಸ್ಟ್ರಿ ಇವರಿಂದ ಖರೀದಿಸಲಾಗುತ್ತಿದೆ.

ಆ) ಆ ಪೈಕಿ ರಾಜ್ಯಕ್ಕೆ ಸೇರಿರುವ ಘಟಕಗಳು ಯಾವುವು; ಹೊರರಾಜ್ಯದ ಘಟಕಗಳು ಯಾವುವು;

ರಾಜ್ಯದಲ್ಲಿ 175 ತಾಲ್ಲೂಕುಗಳಲ್ಲಿ ಟೆಂಡರ್ ಕರೆದು ಸ್ಥಳೀಯ ಆಹಾರ ಸಾಮಗ್ರಿಗಳನ್ನು ಖರೀದಿಸಲಾಗುತ್ತಿದೆ. ಟೆಂಡರ್‌ದಾರರು ಸ್ಥಳೀಯ ಮಹಿಳಾ ಸ್ವ–ಸಹಾಯ ಸಂಘ/ಮಹಿಳಾ ಮಂಡಳಿಗಳಾಗಿರುತ್ತಾರೆ. ಎಲ್ಲಾ ಅಂಗನವಾಡಿ ಕೇಂದ್ರಗಳಿಗೆ ಶಕ್ತಿಯುತ ಆಹಾರ ಅಮಲೈಸ್ಡ್ ಶಕ್ತಿಯುತ ಆಹಾರವನ್ನು ಕ್ಯಾಪಾಸಿಟಿ ಬಿಲ್ಡರ್ ಆಗಿರುವ M/S ಕ್ರಿಸ್ಪಿ ಫ್ರೈಡ್‌ಗ್ರಾಂ ಇಂಡಸ್ಟ್ರಿ, ಬಾಲಗಾರನಹಳ್ಳಿ, ಅತ್ತಿಬೆಲೆ ಇವರಿಂದ ಖರೀದಿಸಲಾಗುತ್ತದೆ. ಇದು ತಮಿಳುನಾಡು ಮೂಲದ ಸಂಸ್ಥೆಯಾಗಿರುತ್ತದೆ.

ಇ) ಹೊರರಾಜ್ಯದಿಂದ ಸಾಮಗ್ರಿಗಳನ್ನು ಖರೀದಿಸುತ್ತಿರುವುದು ನಿಜವೇ; ಸ್ಥಳೀಯ ಘಟಕಗಳಿಂದ ಖರೀದಿಸದಿರಲು ಕಾರಣವೇನು?

ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಇತ್ಯಾದಿ ಯೋಜನೆಗಳನ್ನು ಅನುಷ್ಠಾನ ಗೊಳಿಸುವ ಕುರಿತು ಮಾನ್ಯ ಸರ್ವೋಚ್ಚ ನ್ಯಾಯಲಯದಲ್ಲಿ ಹೂಡಲಾಗಿರುವ ರಿಟ್ ಅರ್ಜಿ ಸಂ:196/ 2001 ರಲ್ಲಿ ದಿನಾಂಕ:13.12.2006 ರಂದು ಅಂಗನವಾಡಿ ಕೇಂದ್ರಗಳಿಂದ ವಿತರಿಸುತ್ತಿರುವ ಪೂರಕ ಪೌಷ್ಟಿಕ ಆಹಾರವನ್ನು ಗುತ್ತಿಗೆದಾರರಿಂದ ಖರೀದಿಸಬಾರದೆಂದು ಹಾಗೂ ಆದ್ಯತೆಯ ಮೇಲೆ ಗ್ರಾಮ ಸಮುದಾಯ, ಮಹಿಳಾ ಮಂಡಳ ಇತ್ಯಾದಿಗಳಿಂದ ಖರೀದಿಸಬೇಕೆಂದು ನಿರ್ದೇಶನ ನೀಡಿರುತ್ತದೆ. ಗ್ರಾಮ ಸಮುದಾಯ ಇತ್ಯಾದಿ ಸದಸ್ಯರಿಗೆ ತರಬೇತಿ ನೀಡಿ ರಾಜ್ಯದಲ್ಲಿ 137 ಮಹಿಳಾ ಪೂರಕ ಪೌಷ್ಟಿಕ ಆಹಾರ ಉತ್ಪಾದನೆ ಮತ್ತು ತರಬೇತಿ ಕೇಂದ್ರಗಳನ್ನು ಸ್ಥಾಪಿಸಲು

ಕಟ್ಟಡಗಳನ್ನು ಪಡೆದು ಅವುಗಳಲ್ಲಿ ಅವಶ್ಯ ಯಂತ್ರೋಪಕರಣಗಳನ್ನು ಅಳವಡಿಸಿ ಪ್ರಾರಂಭಿಕ ಬಂಡವಾಳ ನೋಂದಾಣಿ ಮಾಡುವುದನ್ನು ಒಳಗೊಂಡಂತೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು, ಹೆಚ್ಚಿನ ಆರ್ಥಿಕ ಹೊರೆಯಾಗದಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದನ್ವಯ ಟೆಂಡರನ್ನೂ ಪ್ರಮುಖ ಪತ್ರಿಕೆಗಳ ಮೂಲಕ ಕರೆದಿದ್ದು, ಮೆ:ಕ್ರಿಸ್ಟಿ ಫ್ರೈಡ್‌ಗ್ರಾಂ ಇಂಡಸ್ಟ್ರಿ ಸಂಸ್ಥೆಯು ಆಯ್ಕೆ ಆಗಿದ್ದು, ಆಹಾರ ಸರಬರಾಜನ್ನು ದಿನಾಂಕ:31.07.2009 ರವರೆಗೆ ಮಾಡಲಿದ್ದು, ನಂತರ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ದಿನಾಂಕ:01.08.2009 ರ ನಂತರ ಮಹಿಳಾ ಪೂರಕ ಪೌಷ್ಟಿಕ ಆಹಾರ ಉತ್ಪಾದನಾ ಮತ್ತು ತರಬೇತಿ ಕೇಂದ್ರಗಳ ಸದಸ್ಯರು ಟೆಂಡರ್ ನಿಬಂಧನೆಗಳನ್ವಯ ಸ್ವತಂತ್ರವಾಗಿ ಆಹಾರವನ್ನು ತಯಾರಿಸಿ ಸರಬರಾಜು ಮಾಡಲಿದ್ದಾರೆ.

41 ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ)
ಉಮೇಶ್ ಎ ಕತ್ತಿ (ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು)

ಅ) ರಾಜ್ಯದಲಿ ತೋಟಗಾರಿಕಾ ಬೆಳೆಗಳನ್ನು ಬೆಳೆಯುತ್ತಿರುವ ಜಿಲ್ಲೆಗಳು ಯಾವುವು (ತಾಲ್ಲೂಕುವಾರು ವಿವರ ನೀಡುವುದು);

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳಯಲಾಗುತ್ತಿದೆ. ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಹಾಗಿದ್ದಲ್ಲಿ, ಸದರಿ ಕಾರ್ಯಕ್ಕೆ ಆಯ್ಕೆ ಮಾಡಲಾಗಿರುವ ಜಿಲ್ಲೆಗಳ ಸಂಖ್ಯೆ ಎಷ್ಟು (ವಿವರಗಳನ್ನು ನೀಡುವುದು);

29 ಜಿಲ್ಲೆಗಳು. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ರೈತರು ತೋಟಗಾರಿಕಾ ಬೆಳೆಗಳನ್ನು ಬೆಳೆಯುವಂತೆ ಪ್ರೋತ್ಸಾಹಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.

(1) ವಿವಿಧ ತೋಟಗಾರಿಕೆ ಬೆಳೆಗಳನ್ನು ಬೆಳೆಸಲು ಪ್ರದೇಶ ವಿಸ್ತರಣೆಗಾಗಿ ರೈತರಿಗೆ ಸಹಾಯಧನ ನೀಡಲಾಗುತ್ತಿದೆ.

(2) ಉತ್ಪಾದಕತೆಯನ್ನು ಹೆಚ್ಚಿಸಲು ಮತ್ತು ಲಭ್ಯ ನೀರಿನ ಸದ್ಬಳಕೆ ಮಾಡಲು ಹನಿನೀರಾವರಿ ಮತ್ತು ತುಂತುರು ನೀರಾವರಿ ವ್ಯವಸ್ಥೆ ಅಳವಡಿಸಲು ಸಹಾಯಧನ ನೀಡಲಾಗುತ್ತಿದೆ.

(3) ತೋಟದ ಬೆಳೆಗಳ ಸಸ್ಯ ಸಂರಕ್ಷಣೆಗೆ ಸಹಾಯಧನ ನೀಡಲಾಗುತ್ತಿದೆ.

(4) ಉತ್ತಮ ಗುಣಮಟ್ಟದ ಸಸಿ/ಕಸಿ/ಬೀಜಗಳನ್ನು ಉತ್ಪಾದಿಸಿ ಯೋಗ್ಯ ದರದಲ್ಲಿ ವಿತರಿಸಲಾಗುತ್ತಿದೆ.